2 ನೇ ಅಧಿಕ ದಿವಾಣೆ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು **(2** ನೇ ನ್ಯಾಯಾಲಯ**)** ಧಾರವಾಡ**.**

ಪ್ರಾ.ಸಾ - 03
ಚಾ.ಸಾ - 01

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 02.04.2025 ರಂದು ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.

ಸಾಕ್ಷಿಯ ಹೆಸರು :- ಶ್ರೀ. ಬಸವರಾಜ ಈರಪ್ಪ ಬಂಟನವರ

ವಯಸ್ಸು :- 44 ವರ್ಷ

ಉದ್ಯೋಗ :- ಕೆ ಎಸ್ ಆರ್ ಟಿ ಸಿ ಚಾಲಕ

ವಾಸಸ್ಥಳ :- ಇನಾಮಹೊಂಗಲ

ಮುಖ್ಯ ವಿಚಾರಣೆಃ ಸ. ಸ. ಅಬಿಯೋಜಕರವರಿಂದ

ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯ ಇರುತ್ತದೆ. ಚಾ.ಸಾ-4 ನನ್ನ ಅಳಿಯ. ಚಾ.ಸಾ-5 ನನ್ನ ತಮ್ಮನಾಗಬೇಕು.

ದಿಃ 11-12-2017 ರಂದು ರಾತ್ರಿ 9 ಗಂಟೆಯ ಸುಮಾರಿಗೆ ನಾನು ಅಮ್ಮಿನಭಾವಿಯಲ್ಲಿ ಇದ್ದಾಗ ಇನಾಮಹೊಂಗಲಕ್ಕೆ ಹೋಗುವ ಸಲುವಾಗಿ ನಿಂತಿದಿದ್ದಾಗ ನ್ಯಾಯಾಲಯದ ಮುಂದಿರುವ ಆರೋಪಿತನು ಸ್ಕಾರಪಿಯೋ ವಾಹನದಲ್ಲಿ ಬಂದು ನನ್ನನ್ನು ಊರಿಗೆ ಬಿಡುವುದಾಗಿ ಹೇಳಿ ನನ್ನನ್ನು ವಾಹನದಲ್ಲಿ ಹತ್ತಿಸಿಕೊಂಡು ಸದರೀ ವಾಹನವನ್ನು ಅತೀವೇಗವಾಗಿ ಮತ್ತು ಅಜಾಗರುಕತೆಯಿಂದ ಓಡಿಸಿ ಅಮ್ಮಿನಭಾವಿಯಲ್ಲಿಯ ಅಯ್ಯಪ್ಪ ಸ್ವಾಮಿ ಗುಡಿಯ ಹತ್ತೀರ ಗಿಡಕ್ಕೆ ಡಿಕ್ಕಿ ಪಡಿಸಿ ಅಪಘಾತಪಡಿಸಿರುತ್ತಾರೆ. ಇದರಿಂದ ನನ್ನ ಎಡಗಾಲಿನ ಮೂಳೆ ಮುರಿದಿರುತ್ತದೆ. ಹಾಗೂ ನನ್ನ ಮುಖದ ಮೇಲೆ ತೆರಚಿದ ಗಾಯಗಳು ಆಗಿರುತ್ತವೆ. ಆರೋಪಿತರಿಗೆ ಸಣ್ಣಪುಟ್ಟ ಗಾಯಗಳು ಆಗಿರುತ್ತವೆ. ಸದರೀ ವಿಷಯವನ್ನು ನಾನು ಚಾಸಾ-4 ರವರಿಗೆ ದೂರವಾಣಿ ಮುಖಾಂತರ ತಿಳಿಸಿರುತ್ತೇನೆ. ಸದರೀಯವರು ಚಾ.ಸಾ-5 ರವರೊಡನೆ ಸದರೀ ಜಾಗೆಗೆ ಬಂದಿರುತ್ತಾರೆ. ಅಲ್ಲಿಂದ ನನ್ನನ್ನು ಅವರು ಧಾರವಾಡದ ಜಿಲ್ಲಾ ಆಸ್ಪತ್ರೆಗೆ ಚಿಕಿತ್ಸೆಗಾಗಿ

ಕರೆದುಕೊಂಡು ಬಂದು ದಾಖಲಿಸಿರುತ್ತಾರೆ. ಆರೋಪಿತರು ರಾಜೀಯಾಗುತ್ತೇವೆಂದು ಮಾತುಕತೆಗೆ ಬಂದಿರುತ್ತಾರೆ. ಆದರೆ ಹಿರಿಯರ ಜೊತೆಗೆ ಯಾವುದೇ ರಾಜೀಯಾಗದೇ ಇರುವ ಕಾರಣ ದಿಃ 20.12.2017 ರಂದು ಜಿಲ್ಲಾ ಆಸ್ಪತ್ರೆಯಲ್ಲಿ ಇದ್ದಾಗ ದೂರು ನೀಡಿರುತ್ತೇವೆ. ಸದರೀ ದೂರನ್ನು ಚಾ.ಸಾ-4 ರವರು ನಾನು ಹೇಳಿದಂತೆ ಬರೆದು ದಸ್ಕೂರ ಸಹಿ ಮಾಡಿರುತ್ತೇನೆ. ಸದರೀ ಅಪಘಾತವು ಆರೋಪಿತರು ಅಜಾಗರೂಕತೆ ಮತ್ತು ಅತೀವೇಗವಾಗಿ ಗಾಡಿ ಚಲಾಯಿಸಿದ್ದರಿಂದ ಆಗಿರುತ್ತದೆ.

ಸಾಕ್ಷಿಯು ನಿ.ಪಿ-3 ರಿಂದ ನಿ.ಪಿ-5 ರಲ್ಲಿಯ ಭಾವಚಿತ್ರಗಳಲ್ಲಿಯ ವಾಹನವನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನಿ.ಪಿ-6 ರ ದೂರಿನಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ-6(ಬಿ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ:-

ಪಾಟೀ ಸವಾಲಿಗೆ ಆರೋಪಿತರ ಪರ ವಕೀಲರು ವೇಳೆ ಕೇಳಿದ್ದು ವೇಳೆ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ ಸರಿ ಅದೆ.

2 ನೇ ದಿವಾಣೆ ನ್ಯಾಯಾಧೀಶರು ಹಾಗೂ
2 ನೇ ಪ್ರದಾನ್ಯಾದಂ. ಧಾರವಾಡ